ಓ.ಎಸ್.350-2014

ಡಿಡಬ್ಲು-1

ದಿ: 05.03.2026 ರಂದು ಪ್ರತಿವಾದಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು**: ವಾದಿ ಪರ ಶ್ರೀಯುತ ಎ.ಜಿ.ಎನ್. ವಕೀಲರಿಂದ.

9. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ 11 ರಲ್ಲಿ ಕಾಣಿಸಿರುವಂತೆ ದಿ: 19.08.1990 ರಂದು ನನ್ನ ತಾಯಿ ದಾವಾ ಆಸ್ತಿಯನ್ನು ಖರೀದಿಸಿದ್ದರು ಎನ್ನುವ ಕುರಿತು ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ ಎಂದರೆ ಸರಿ. ಸದರಿ ದಿ: 19.08.1990 ರ ಕ್ರಯ ಪತ್ರ ನನ್ನ ಬಳಿ ಇರುತ್ತದೆ. ಸದರಿ ದಿ: 19.08.1990 ರ ಕ್ರಯ ಪತ್ರ ನೊಂದಣಿ ಆಗಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಿ: 19.08.1990 ರ ಕ್ರಯ ಪತ್ರ ನೊಂದಣಿ ಆಗಿರುತ್ತದೆ ಎಂದು ಸುಳ್ಳಾಗಿ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ದಿ: 19.08.1990 ರ ಕ್ರಯ ಪತ್ರವು ನೊಂದಣಿ ಆಗಿದ್ದರೆ ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ಆ ರೀತಿ ದಿ: 19.08.1990 ರ ಕ್ರಯ ಪತ್ರವು ನೊಂದಣಿ ಆಗಿರದ ಮೇರೆಗೆ ದಾವಾ ಆಸ್ತಿಯನ್ನು ಕಬಳಿಸುವ ಸಲುವಾಗಿ ಪಂಚಾಯ್ತಿ ದಾಖಲೆಗಳನ್ನು ತಿದ್ದಿ ನಮೂದು ಮಾಡಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಶ್ರೀರಂಗಮ್ಮ ರವರಿಗೆ ತನ್ನ ಗಂಡನಿಂದ ಬಂದಂತಹ ಆಸ್ತಿ ಆಗಿದ್ದು ಮತ್ತು ನಾನು ಸದರಿ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಪಂಚಾಯ್ತಿ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

10. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವಂತೆ ದಿ: 08.08.2001 ರಂದು ನನ್ನ ತಾಯಿ ಬರೆದಿದ್ದಾರೆ ಎಂದು ಹೇಳುವ ನೊಂದಾಯಿತ ಉಯಿಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ದಿ: 08.08.2001 ರಂದು ನನ್ನ ತಾಯಿ ನನಗೆ ಯಾವುದೇ ನೊಂದಾಯಿತ ಉಯಿಲನ್ನು ಬರೆದುಕೊಟ್ಟಿರದ ಮೇರೆಗೆ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿ: 03.07.2014 ರಂದು ನಾನು ಶ್ರೀರಂಗಮ್ಮ ರವರಿಗೆ ಸೇರಿದ ದಾವಾ ಆಸ್ತಿಯಲ್ಲಿ ಪಾಯಾ ಹಾಕಲು ಪ್ರಯತ್ನಿಸಿರುತ್ತೇನೆ ಎಂದರೆ ಸಾಕ್ಷಿಯು ಸದರಿ ಪಾಯಾ ಹಾಕಲು ಹೋಗುವ ಪೂರ್ವದಲ್ಲಿ ಒಂದು ಮನೆಯನ್ನು ಕಟ್ಟಿದ್ದೆ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯಲ್ಲಿ ಪಾಯಾವನ್ನು ಹಾಕಿರುತ್ತೇನೆ ಎಂದರೆ ಸರಿ. ದಿ: 03.07.2014 ರಂದು ಸದರಿ ಪಾಯವನ್ನು ನಿರ್ಮಿಸಿರುತ್ತೇನೆ ಎಂದರೆ ಸಾಕ್ಷಿಯು ಪಾಯಾ ಹಾಕಿರುತ್ತೇನೆ ಮತ್ತು ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನಾನು ಪಾಯಾ ಹಾಕಲು ಹೋದಾಗ ವಾದಿಯು ನನ್ನ ವಿರುದ್ಧ ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಆ ರೀತಿ ನಾನು ಅನಧಿಕೃತವಾಗಿ ಶ್ರೀರಂಗಂ ರವರ ಆಸ್ತಿಯಲ್ಲಿ ಪಾಯಾ ಹಾಕಲು ಹೋದಾಗ ವಾದಿಯು ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ಸೀತಮ್ಮ ಎನ್ನುವವರ ಮಕ್ಕಳು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಪಾಯಾ ಹಾಕಲು ಹೋದ ಮೇರೆಗೆ ನನ್ನ ವಿರುದ್ಧ ಪೊ.ಠಾಣೆಗೆ ದೂರು ನೀಡಲಾಗಿರುತ್ತದೆ ಎಂದರೆ ಸರಿ. ವಾದಿಯು ನಾನು ದಾಖಲೆಗಳನ್ನು ಸೃಷ್ಟಿಸಿದ ಮೇರೆಗೆ ನನ್ನ ವಿರುದ್ಧ ಲೋಕಾಯುಕ್ತ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಆ ರೀತಿ ವಾದಿಯು ಲೋಕಾಯುಕ್ತ ಕಛೇರಿಗೆ ದೂರು ನೀಡಿದ ನಂತರ ಲೋಕಾಯುಕ್ತ ಕಛೇರಿಯವರು ವರದಿ ನೀಡಲು ಆದೇಶ ಮಾಡಿದ್ದು ಮತ್ತು ಸದರಿ ಆದೇಶದ ಮೇರೆಗೆ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿರವರು ದಾಖಲೆಗಳನ್ನು ತಿದ್ದುಪಡಿ ಮಾಡಿರುವ ಕುರಿತು ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಈಗ ನನಗೆ ತೋರಿಸಿದ ನಿಪಿ.37 ಸದರಿ ಪಿ.ಡಿ.ಓ ರವರ ವರದಿ ಆಗಿರುತ್ತದೆ ಎಂದರೆ ಸರಿ.

11. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರದೇ ಇದ್ದರೂ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಧನೆ ಮಾಡುತ್ತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮಗೆ ದಾವಾ ಆಸ್ತಿಯನ್ನು ಶ್ರೀರಂಗಮ್ಮ ರವರಿಗೆ ಬಿಟ್ಟು ಕೊಡಲು ಯಾವುದೇ ಅಭ್ಯಂತರ ಇರುವುದಿಲ್ಲ ಎಂದರೆ ಸಾಕ್ಷಿಯು ಬಿಟ್ಟುಕೊಡುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಅಧೀಕಾರಗಳು ಇರುವುದಿಲ್ಲ ಮತ್ತು ನಾನು ದಾವಾ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.